# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ 17.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ತಾರಾ ಕೋಂ ಮೋಹನ್ ಕುಮಾರ್<br>34 ವರ್ಷ<br>ಗೃಹಿಣಿ<br>ರಾಮೇನಹಳ್ಳಿ |
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ-7 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಬಿ ಕೆ ರವರಿಂದ

1 ಮತ್ತು 2 ನೇ ಪ್ರತಿವಾದಿಯರು ನಿಮಗೆ ಏನಾಗಬೇಕು ಎಂದರೆ ನಮ್ಮ ತಂದೆ ತಾಯಿ ಎಂದು ನುಡಿಯುತ್ತಾರೆ. 3 ರಿಂದ 5 ನೇ ಪ್ರತಿವಾದಿಯರು ಏನಾಗಬೇಕು ಎಂದರೆ ತಮ್ಮ ಮತ್ತು ತಂಗಿಯರು ಎಂದು ನುಡಿಯುತ್ತಾರೆ. ಈ ದಾವಾವನ್ನು ನೀವು ಯಾವ ಉದ್ದೇಶಕ್ಕೆ ಹಾಕಿದ್ದಿರಿ ಎಂದರೆ ಸಾಕ್ಷಿಯು ನನ್ನ ತಾತನ ಆಸ್ತಿಯಲ್ಲಿ ಭಾಗ ಬೇಕೆಂದು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನೀವು ಎಲ್ಲಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದಿರಿ ಎಂದರೆ ಸಾಕ್ಷಿಯು ದ್ವಿತೀಯ ಪಿ ಯು ಸಿ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಸ.ನಂಬರ್ ಏನು ಎಂದರೆ 10/1 ಎ ಎಂದು ನುಡಿಯುತ್ತಾರೆ. ಅದರ ಒಟ್ಟು ವಿಸ್ತೀರ್ಣ ಎಷ್ಟು ಇರುತ್ತದೆ ಎಂದರೆ ಸಾಕ್ಷಿಯು 6 ಎಕರೆ ಎಂದು ನುಡಿಯುತ್ತಾರೆ. ಈ ದಾವಾ ಹಾಕುವ ಪೂರ್ವದಲ್ಲಿ ಸ.ನಂ.10/1 ಎ ರಲ್ಲಿ ಒಟ್ಟು ಎಷ್ಟು ಆಸ್ತಿ ಇತ್ತು ಎಂದರೆ ಸಾಕ್ಷಿಯು 7 ಎಕರೆ ಇತ್ತು ಎಂದು ನುಡಿಯುತ್ತಾರೆ. ನೀವು ಈ ದಾವಾವನ್ನು 6 ಎಕರೆಗೆ ಮಾತ್ರ ಸಲ್ಲಿಸಿದ್ದು

ಇನ್ನೊಂದು ಎಕರೆ ಏನಾಗಿರುತ್ತದೆ ಎಂದರೆ ನನ್ನ ಅತ್ತೆಯಾದ ಗಂಗಮ್ಮ ರವರಿಗೆ ನನ್ನ ತಂದೆ ತಾಯಿ ಮಕ್ಕಳು ಸೇರಿ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ 1 ಎಕರೆಯನ್ನು ಕೊಂಡುಕೊಂಡಿರುವ ನಿಮ್ಮ ಅತ್ತೆ ಗಂಗಮ್ಮ ರವರನ್ನು ಈ ದಾವಾದ ಪಕ್ಷಗಾರರನ್ನಾಗಿ ಮಾಡಿದ್ದಿರಾ ಅಥವಾ ಅವರ ವಿರುದ್ಧ ಪ್ರತ್ಯೇಕ ಪ್ರಕರಣವನ್ನು ದಾಖಲು ಮಾಡಿದ್ದಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮದುವೆ ಯಾವ ವರ್ಷ ಆಗಿರುತ್ತದೆ ಎಂದರೆ 2011 ರಲ್ಲಿ ಎಂದು ನುಡಿಯುತ್ತಾರೆ. ನಿಮ್ಮ ಮದುವೆಯನ್ನು ಯಾರು ಮಾಡಿದ್ದಾರೆ ಎಂದರೆ ನನ್ನ ತಂದೆ ಮಾಡಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಅತ್ತೆಗೆ ನೀಡಿರುವ 1 ಎಕರೆ ಜಮೀನಿನ ಖಾತೆಯನ್ನು ಪ್ರತ್ಯೇಕವಾಗಿ ಮಾಡಿಸಿಕೊಂಡು ನಿಮ್ಮ ಅತ್ತೆ ಗಂಗಮ್ಮ ರವರು ಸದರಿ 1 ಎಕರೆಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ.

2. ನಿಮ್ಮ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. 2 ನೇ ಪ್ರತಿವಾದಿ ಪುಷ್ಪಲತ ರವರು ನಿಮ್ಮ ತಾಯಿ ಎಂದರೆ ಸರಿ. ನಿಮ್ಮ ತಂದೆಯ ಎರಡನೇ ಹೆಂಡತಿಯಾದ ಪದ್ಮಾ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಪೈಕಿ 3 ಎಕರೆ ಜಮೀನನ್ನು ನೀವು ನಿಮ್ಮ ತಂದೆ ತಾಯಿ ಮತ್ತು ತಂಗಿ ತಮ್ಮಂದಿರು ಸೇರಿ ದಿಃ 17.11.2011 ರಂದು ಮಾರಾಟ ಮಾಡಲು ಒಪ್ಪಿ 7 ನೇ ಪ್ರತಿವಾದಿಯ ಗಂಡ ಶಿವಾನಂದ್ ರವರಿಗೆ ಕ್ರಯ ಕರಾರು ಪತ್ರ ಮಾಡಿಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ನೀವು ಸೇರಿ ಕ್ರಯ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ದಿಃ 21.05.2012 ರಂದು ನಿಮ್ಮ ತಂದೆ ತಾಯಿ ಹಾಗೂ ತಂಗಿ ತಮ್ಮಂದಿರು ಶಿವಾನಂದ್ ರವರ ಅತ್ತೆಯಾದ ಗೌರಮ್ಮ ರವರಿಗೆ 3 ಎಕರೆ ಜಮೀನನ್ನು ಶುದ್ಧ ಕ್ರಯಕ್ಕೆ ನೀಡಿ ನೊಂದಾಯಿತ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನಿಮಗೆ ಗೊತ್ತಿದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದ ಆಧಾರದ ಮೇಲೆ 3 ಎಕರೆ ಜಮೀನಿನ ಖಾತೆಯು ಗೌರಮ್ಮ ರವರ

ಹೆಸರಿಗೆ ಬದಲಾವಣೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಗೌರಮ್ಮ ರವರು ಸದರಿ 3 ಎಕರೆ ಜಮೀನಿನಲ್ಲಿ ಕೊಳವೆ ಬಾವಿಯನ್ನು ತೆಗೆಸಿ ಸದರಿ ಜಮೀನಿಗೆ ತಂತಿ ಬೇಲಿಯನ್ನು ನಿರ್ಮಿಸಿಕೊಂಡು ಅಡಿಕೆ, ತೆಂಗು, ಮಾವಿನ ಗಿಡಗಳನ್ನು ಬೆಳೆಸಿದ್ದಾರೆ ಎಂದರೆ ಸರಿಯಲ್ಲ. ನಂತರ ಗೌರಮ್ಮ ರವರು ವಿಭಾಗ ಪತ್ರ ಮಾಡಿ, ಸದರಿ ವಿಭಾಗ ಪತ್ರದ ಮೂಲಕ ಸದರಿ 3 ಎಕರೆ ಜಮೀನು 7ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 21.05.2012 ರಂದು ಗೌರಮ್ಮರವರಿಗೆ ಕ್ರಯ ಪತ್ರ ನೊಂದಣಿ ಮಾಡಿಕೊಡುವ ದಿನ ನೀವು ಗಂಡನ ಮನೆಯಲ್ಲಿ ಇದ್ದ ಕಾರಣ ಹಾಗೂ ಆ ದಿನ ನೀವು ಬಂದು ಸಹಿ ಮಾಡಲು ಆಗದೇ ಇದ್ದ ಕಾರಣ ಮರುದಿನ ಅಂದರೆ ದಿಃ 22.05.2012 ರಂದು ಒಪ್ಪಿಗೆ ಕರಾರು ಪತ್ರವನ್ನು ಗೌರಮ್ಮರವರ ಹೆಸರಿಗೆ ಮಾಡಿಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಸದರಿ 3 ಎಕರೆ ಜಮೀನನ್ನು ನಿಮ್ಮ ಮದುವೆಯ ಖರ್ಚಿಗೋಸ್ಕರ ಮತ್ತು ಬ್ಯಾಂಕಿನಲ್ಲಿ ಮಾಡಿದ್ದ ಸಾಲದ ತೀರುವಳಿಗಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

3. ದಿಃ 17.11.2011 ರ ಕರಾರು ಪತ್ರವನ್ನು ಸಾಕ್ಷಿಗೆ ತೋರಿಸಿ ಸದರಿ ಕರಾರು ಪತ್ರಕ್ಕೆ ನೀವು, ಪ್ರತಿವಾದಿ 1 ರಿಂದ 5 ರವರು ಸಹಿ ಮಾಡಿ ಬರೆದುಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ಸಹಿ ನಿಮ್ಮದಾಗಿದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ 22.11.2011 ರ ಕರಾರು ಪತ್ರವನ್ನು ತೋರಿಸಿ ನೀವು ಪ್ರತಿವಾದಿ 1 ರಿಂದ 5 ರವರು 2 ನೇ ಕಂತಿನಲ್ಲಿ ಹಣವನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಮತ್ತೊಂದು ಕರಾರು ಪತ್ರವನ್ನು ಮಾಡಿಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಕರಾರು ಪತ್ರವನ್ನು ತೋರಿಸಿ ಸದರಿ ಕರಾರು ಪತ್ರದಲ್ಲಿನ ಸಹಿ ನಿಮ್ಮ ತಂದೆಯ ಸಹಿ ಎಂದರೆ ಸರಿ.. ಸದರಿ ದಿಃ 22.11.2011 ರ ಕರಾರು ಪತ್ರದಲ್ಲಿ ನಿಮ್ಮ ತಾಯಿ ಪುಷ್ಪಲತಾ, ಚಿಕ್ಕಮ್ಮ ಪದ್ಮಾ, ಮಗ ಮಧು ಸಹಿ ಮಾಡಿದ್ದಾರೆ ಎಂದರೆ ಸರಿ. ಸದರಿ ಕರಾರು ಪತ್ರದಲ್ಲಿನ ಸಹಿ ನಿಮ್ಮದು ಎಂದರೆ ಸರಿಯಲ್ಲ. ದಿಃ 17.11.2011 ರ ಕರಾರು ಪತ್ರದಲ್ಲಿ ಇರುವ ಸಹಿ ನಿಮ್ಮ ತಂದೆ ತಾಯಿ, ತಮ್ಮ, ಚಿಕ್ಕಮ್ಮ ರವರ ಸಹಿ ಎಂದರೆ ಸಾಕ್ಷಿಯು ಅವರು ಮಾಡಿರಬಹುದು

ಆದರೆ ನಾನು ಮಾಡಿಲ್ಲ ಎಂದು ನುಡಿಯುತ್ತಾರೆ. ದಿಃ 22.05.2012 ರ ಒಪ್ಪಿಗೆ ಕರಾರು ಪತ್ರವನ್ನು ತೋರಿಸಿ ಅದರಲ್ಲಿ ಇರುವ ಸಹಿ ನಿಮ್ಮದು ಎಂದರೆ ಸರಿಯಲ್ಲ. ದಾವಾದಲ್ಲಿ ಇರುವ ನಿಮ್ಮ ಸಹಿ ಮತ್ತು ದಿಃ 22.05.2012 ರ ಒಪ್ಪಿಗೆ ಪತ್ರದಲ್ಲಿನ ಸಹಿಗಳು ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ 21.05.2012 ರಂದು ಕ್ರಯ ಪತ್ರ ಮಾಡಿಕೊಡುವ ದಿನ ಬಂದು ಸಹಿ ಮಾಡಲು ಸಾಧ್ಯವಾಗದೇ ಇರುವ ಕಾರಣ ತಾವು ದಿಃ 22.05.2012 ರಂದು ಒಪ್ಪಿಗೆ ಪತ್ರವನ್ನು ಬರೆದುಕೊಡುತ್ತಿದ್ದೇನೆ ಎಂದು ಹೇಳಿ ಬರೆಸಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ತಂದೆ ಮತ್ತು 2 ರಿಂದ 5 ನೇ ಪ್ರತಿವಾದಿಯರು ಗೌರಮ್ಮರವರಿಗೆ ಮಾರಾಟ ಮಾಡಿರುವ 3 ಎಕರೆ ವಿಸ್ತೀರ್ಣಕ್ಕೆ ಚಕ್ಕುಬಂದಿ ಪೂರ್ವಕ್ಕೆ – ಚಿಕ್ಕಣ್ಣ, ಪಶ್ಚಿಮಕ್ಕೆ – ರಸ್ತೆ, ಉತ್ತರಕ್ಕೆ – ರಸ್ತೆ ಮತ್ತು ಸ.ನಂ.11 ರ ಜಮೀನು, ದಕ್ಷಿಣಕ್ಕೆ – ನಿಮ್ಮ ಉಳಿಕೆ ಜಮೀನು ಎಂದರೆ ಸರಿ. ಈ ಮೇಲ್ಕಂಡ ಚಕ್ಕುಬಂದಿಯ ಆಸ್ತಿಗೆ 7 ನೇ ಪ್ರತಿವಾದಿಯು ಮುಳ್ಳು ತಂತಿಯ ಬೇಲಿಯನ್ನು ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 7 ನೇ ಪ್ರತಿವಾದಿಯು ಕೊಳವೆ ಬಾವಿಯನ್ನು ತೆರೆದು ಅಡಿಕೆ ತೆಂಗಿನ ಸಸಿಗಳನ್ನು ಬೆಳೆದು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನಿಮಗೆ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ಹೆಚ್ಚಿನ ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದಿರಿ ಎಂದರೆ ಸರಿಯಲ್ಲ. ಇನ್ನೂ ಈಗಲೂ 3 ಎಕರೆ ಜಮೀನು ನಿಮ್ಮ ತಂದೆಯ ಹೆಸರಿನಲ್ಲಿ ಇದ್ದು, ನಿಮ್ಮ ತಂದೆ ಅದನ್ನು ಅನುಭವಿಸುತ್ತಿದ್ದಾರೆ ಎಂದರೆ ಸಾಕ್ಷಿಯು ನಾವು ಸಹ ಅದನ್ನು ಅನುಭವಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ನಿಮಗೆ ನಿಮ್ಮ ತಂದೆಯ 3 ಎಕರೆ ಜಮೀನಿನಲ್ಲಿ ಭಾಗ ನೀಡಿದರೆ ಭಾಗ ಪಡೆಯಲು ತಯಾರಿದ್ದಿರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಅನುಭವಿಸುತ್ತಿರುವ 3 ಎಕರೆ ಜಮೀನಿನಲ್ಲಿ ಎರಡು ಬೋರ್ ವೆಲ್ ಗಳು ಇದ್ದು, ಅಡಿಕೆ ಮತ್ತು ತೆಂಗಿನ ಮರಗಳು ಇರುತ್ತವೆ ಎಂದರೆ ಸರಿ. 7 ನೇ ಪ್ರತಿವಾದಿಯು ತನ್ನ ಹೆಸರಿಗೆ 3 ಎಕರೆ ಜಮೀನಿನ ಖಾತೆ ಬದಲಾವಣೆ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯು ತನ್ನ ಹೆಸರಿಗೆ ಮಾಡಿಸಿಕೊಂಡಿರುವ ಖಾತೆಯನ್ನು ಪ್ರಶ್ನಿಸಿ

ನೀವೇನಾದರೂ ಸಂಬಂಧಪಟ್ಟ ರೆವೆನ್ಯೂ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಅತ್ತೆ ಗಂಗಮ್ಮ ರವರಿಗೆ ನೀಡಿರುವ 1 ಎಕರೆ ಆಸ್ತಿಯ ಮ್ಯೂಟೇಶನ್ ಅನ್ನು ಪ್ರಶ್ನೆ ಮಾಡಿ ಆಪೀಲು ಸಲ್ಲಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹೆಚ್ಚಿನ ಲಾಭಂಶ ಪಡೆಯುವ ದುರುದ್ದೇಶದಿಂದ ನೀವು ನಿಮ್ಮ ತಂದೆಯ ಜೊತೆ ಶಾಮೀಲು ಆಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದಿರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.